ಈ ಲೇಖನದ ವಿಷಯಾನುಕ್ರಮಣಿಕೆ


**ವಾರುಣೀಯೋಗಗಳು 2**

**ಮಾಘಮಾಸದಲ್ಲಿ ವಾರುಣೀಯೋಗ 3**

ಶ್ರಾದ್ಧವನ್ನು ಮಾಡಲು ಸಾಧ್ಯವಿಲ್ಲದಿದ್ದಲ್ಲಿ 6

ತರ್ಪಣ, ಬ್ರಾಹ್ಮಣ ಭೋಜನ 6

ವಾರುಣೀ ಶ್ರಾದ್ಧ ಸಂಕಲ್ಪ 6

ಗೋಗ್ರಾಸ 8

ದಾನ 9

ಜ್ಞಾನಕಾರ್ಯ 9

ನಮಸ್ಕಾರ 10

**ಚೈತ್ರಮಾಸದಲ್ಲಿ ವಾರುಣೀಯೋಗ 11**

ಗಂಗಾಸ್ನಾನದಿಂದ ಮಹತ್ತರ ಫಲ 11

**ಈ ರೀತಿಯ ಮಹತ್ತ್ವ ಹೇಗೆ ಬರಲು ಸಾಧ್ಯ 13**


6-3-2019, ಬುಧವಾರ, ಮಾಘ ಕೃಷ್ಣ ಅಮಾವಾಸ್ಯೆಯಂದು ವಾರುಣೀಯೋಗವಿದೆ. ತಿಳಿದು ಆಚರಿಸುವ ಸಜ್ಜನರಿಗಾಗಿ ವಾರುಣೀಯೋಗದ ಕುರಿತ ಮಹತ್ತ್ವದ ವಿವರಣೆ ಈ ಲೇಖನದಲ್ಲಿದೆ.

## ವಾರುಣೀಯೋಗಗಳು

ವಾರುಣೀ ಎಂದರೆ ವರುಣದೇವರಿಗೆ ಸಂಬಂಧಿಸಿದ ಶತಭಿಷಾ ನಕ್ಷತ್ರ. ಒಂದು ವರ್ಷಕ್ಕೆ ಅನೇಕ ಬಾರಿ ಆವರ್ತವಾಗುವ ಈ ನಕ್ಷತ್ರ ಎರಡು ವಿಶಿಷ್ಟ ದಿವಸಗಳಲ್ಲಿ ಬಂದಾಗ ವಾರುಣೀಯೋಗ[1] ಉಂಟಾಗುತ್ತದೆ.

ಒಂದು ಮಾಘಮಾಸದಲ್ಲಿ. ಮತ್ತೊಂದು ಚೈತ್ರಮಾಸದಲ್ಲಿ

ಮಾಘಮಾಸದ ಅಮಾವಾಸ್ಯೆಯಂದು ಉಂಟಾಗುವ ವಾರುಣೀಯೋಗ ಶ್ರಾದ್ಧಕ್ಕೆ ಶ್ರೇಷ್ಠವಾದ ದಿವಸ.

ಚೈತ್ರ ಮಾಸದ ಕೃಷ್ಣಪಕ್ಷದ ತ್ರಯೋದಶಿಯಂದು ಉಂಟಾಗುವ ವಾರುಣೀಯೋಗ ಗಂಗಾಸ್ನಾನಕ್ಕೆ ಶ್ರೇಷ್ಠವಾದಂತಹ ದಿವಸ.

---

[1] वारुणी, वारुणीतारा। तस्या योगो वारुणीयोग:।

## ಮಾಘಮಾಸದಲ್ಲಿ ವಾರುಣೀಯೋಗ

ಮಾಘಮಾಸದ ಅಮಾವಾಸ್ಯೆಯಂದು ಶತಭಿಷಾಕ್ಷತ್ರವಿದ್ದರೆ ಅದು ವಾರುಣೀಯೋಗ ಎಂದು ವಿಷ್ಣುಪುರಾಣ ತಿಳಿಸುತ್ತದೆ.

**ಮಾಘಾಸಿತೇ ಪಂಚದಶೀ ಕದಾಚಿತ್**
**ಉಪೈತಿ ಯೋಗಂ ಯದಿ ವಾರುಣೇನ ।**
**ಋಕ್ಷೇಣ ಕಾಲಃ ಸ ಪರಃ ಪಿತೃಣಾಂ**
**ನ ಹ್ಯಲ್ಪಪುಣ್ಯೈರ್ನೃಪ ಲಭ್ಯತೇಽಸೌ ।**

"ಮಾಘಮಾಸದ ಕೃಷ್ಣ ಪಕ್ಷದ ಹದಿನೈದನೆಯ ದಿವಸ ಎಂದರೆ ಅಮಾವಾಸ್ಯೆ. ಆ ದಿವಸವೇನಾದರೂ ಶತಭಿಷಾ ನಕ್ಷತ್ರವಿದ್ದರೆ ಅದು ವಾರುಣಯೋಗ. ಪಿತೃಗಳಿಗೆ ಅತ್ಯಂತ ಪ್ರಿಯವಾದ ಶ್ರೇಷ್ಠವಾದ ಕಾಲ. ಕಡಿಮೆ ಪುಣ್ಯ ಮಾಡಿದ ಜನರಿಗೆ ಅದನ್ನು ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲ."

ಮೊದಲಿಗೆ ಅಮಾವಾಸ್ಯೆಯಾದ್ದರಿಂದ ಪಿತೃಗಳಿಗೆ ಸಹಜವಾಗಿ ಪ್ರಿಯವಾದದ್ದು.

ಮಾಘಮಾಸದ ಅಮಾವಾಸ್ಯೆ ಯುಗಾದಿ[2]ಯಾದ್ದರಿಂದ ಮತ್ತಷ್ಟು ಶ್ರೇಷ್ಠವಾದ ಪರ್ವಕಾಲ.

ವರ್ಷದಲ್ಲಿ ತೊಂಭತ್ತಾರು ಶ್ರಾದ್ಧಗಳ ಷಣ್ಣವತಿ ಶ್ರಾದ್ಧ ಎಂಬ ಆಚರಣೆಯಿದೆ. ಈ ಶ್ರಾದ್ಧಗಳನ್ನು ಮಾಡುವವರು ಮಾಘ ಅಮಾವಾಸ್ಯೆಯಂದು ಬಂದಾಗ, ಅಮಾವಾಸ್ಯೆಯ ಶ್ರಾದ್ಧ, ಮತ್ತು ಮಾಘ ಅಮಾವಾಸ್ಯೆಯಾದ್ದರಿಂದ ಯುಗಾದಿಯ ಶ್ರಾದ್ದ ಎರಡನ್ನೂ ಕೂಡಿಸಿ ಮಾಡಬೇಕು, ಆದರೆ ಪಿಂಡಪ್ರದಾನವನ್ನು ಮಾಡಬಾರದು.

ಆದರೆ ಮಾಘ ಮಾಸದ ಅಮಾವಾಸ್ಯೆಯಂದು ಧನಿಷ್ಠಾ ಅಥವಾ ಶತಭಿಷಾ ನಕ್ಷತ್ರಗಳು ಬಂದಿದ್ದಲ್ಲಿ ಅವಶ್ಯವಾಗಿ ಪಿಂಡಪ್ರದಾನವನ್ನು ಮಾಡಬೇಕು. ಅದರಿಂದ ಹತ್ತುಸಾವಿರ ವರ್ಷಗಳ ವರೆಗಿನ ಸುದೀರ್ಘ ತೃಪ್ತಿ ಪಿತೃಗಳಿಗೆ ಉಂಟಾಗುತ್ತದೆ.

---

[2] ಯುಗಾದಿ ಎಂದರೆ ನಮ್ಮ ಚೈತ್ರ ಪ್ರತಿಪದೆಯಲ್ಲ. ನಾಲ್ಕು ಯುಗಗಳು ಆರಂಭವಾದ ದಿವಸಗಳು ಯುಗಾದಿ ಎಂದು ಕರೆಸಿಕೊಳ್ಳುತ್ತವೆ. ಮಾಘ ಕೃಷ್ಣ ಅಮಾವಾಸ್ಯೆ ದ್ವಾಪರಯುಗಾದಿ.

ಕೇವಲ ಮಾಘ ಮಾಸದ ಅಮಾವಾಸ್ಯೆಯಿದ್ದರೆ ಅವತ್ತು ಪಿತೃವರ್ಗಕ್ಕೆ ಮಾತ್ರ (ತಂದೆ, ತಾತ, ಮುತ್ತಾತ) ಶ್ರಾದ್ಧ.

**ವಾರುಣೀಯೋಗ ಬಂದಾಗ ಮಹಾಲಯದಲ್ಲಿ ಮಾಡುವಂತೆ ಸರ್ವಪಿತೃಗಳಿಗೂ ಶ್ರಾದ್ಧವನ್ನು ಮಾಡಬೇಕು.**

ಈ ವಾರುಣೀಯೋಗದ ಶ್ರಾದ್ಧವನ್ನು ಮನೆಯಲ್ಲಿಯೂ ಮಾಡಬಹುದು. ಅಥವಾ ನದೀತೀರ, ಕ್ಷೇತ್ರಗಳಲ್ಲಿ ಮಾಡುವದು ಇನ್ನೂ ಶ್ರೇಷ್ಠ.

ಮನೆಯಲ್ಲಿ ಶ್ರಾದ್ಧ ಮಾಡುವದಾದರೆ ಮಹಾಲಯಶ್ರಾದ್ಧದಂತೆಯೂ, ಕ್ಷೇತ್ರಗಳಲ್ಲಿ ಶ್ರಾದ್ಧ ಮಾಡುವದಾದರೆ ತೀರ್ಥ ಶ್ರಾದ್ಧದಂತೆಯೂ ಮಾಡಬೇಕು.

## ಶ್ರಾದ್ಧವನ್ನು ಮಾಡಲು ಸಾಧ್ಯವಿಲ್ಲದಿದ್ದಲ್ಲಿ ತರ್ಪಣ, ಬ್ರಾಹ್ಮಣ ಭೋಜನ

ಅನಿವಾರ್ಯವಾದ ಅನಾನುಕೂಲತೆಯಿಂದ ಶ್ರಾದ್ಧವನ್ನು ಮಾಡಲಾಗದೇ ಇದ್ದಾಗ, ಸಮಸ್ತ ಪಿತೃಗಳಿಗೂ ದೇವರ ನಿರ್ಮಾಲ್ಯ ತೀರ್ಥದಿಂದ ಮತ್ತು ಎಳ್ಳಿನಿಂದ ತರ್ಪಣವನ್ನು ನೀಡಬೇಕು. ಬ್ರಾಹ್ಮಣ ಭೋಜನವನ್ನು ಮಾಡಿಸಬೇಕು.

## ವಾರುಣೀ ಶ್ರಾದ್ಧ ಸಂಕಲ್ಪ

**ಅಸ್ಮತ್ ಪಿತೃ-ಪಿತಾಮಹ-ಪ್ರಪಿತಾಮಹಾದಿ**
**ಸಮಸ್ತ ಪಿತೃಣಾಂ**

**ಸಮಸ್ತ ಪಾಪಕ್ಷಯಾರ್ಥಂ**
**ಉತ್ತಮಲೋಕಪ್ರಾಪ್ತ್ಯರ್ಥಂ**
**ಜನ್ಮನಿ ಜನ್ಮನಿ ವೈಷ್ಣವತ್ವಪ್ರಾಪ್ತ್ಯರ್ಥಂ**
**ಸರ್ವತ್ರಾಪಿ ಭಗವತ್ಪ್ರಿಯ-ಭೋಗಪ್ರಾಪ್ತ್ಯರ್ಥಂ**

**ಪಿತೃವಲ್ಲಭಾಯಾಂ**

**ವರುಣದೇವತಾಕ-ಶತಭಿಷಾನಕ್ಷತ್ರಯುಕ್ತಾಯಾಂ ಮಾಘಮಾಸೇ ಅಮಾವಾಸ್ಯಾಯಾಂ**

**ಪಿಂಡಪ್ರದಾನಮ್ ಕರಿಷ್ಯೇ, ತದಂಗತ್ವೇನ ಯಥಾಶಕ್ತಿ ಬ್ರಾಹ್ಮಣಭೋಜನಂ, ಗೋಗ್ರಾಸದಾನಂ ಚ ಕರಿಷ್ಯೇ**

ನನ್ನ ತಂದೆ , ತಾತ ಮುತ್ತಾತ ಮೊದಲಾದ ಸಮಸ್ತ ಪಿತೃಗಳ

ಸಕಲ ಪಾಪಗಳೂ ನಾಶವಾಗಲಿ
ಅವರಿಗೆ ಉತ್ತಮ ಲೋಕಗಳು ದೊರೆಯಲಿ
ಭೂಲೋಕದಲ್ಲಿ ಪ್ರತೀ ಜನ್ಮದಲ್ಲಿಯೂ ವೈಷ್ಣವತ್ವ ದೊರೆಯಲಿ
ದೇವರಿಗೆ ಪ್ರಿಯವಾದ ಭೋಗಗಳು ದೊರೆಯಲಿ ಎಂದು
ಪಿತೃಗಳಿಗೆ ಪ್ರಿಯವಾದ, ವರುಣದೇವರ ಅಧೀನವಾದ ಶತಭಿಷಾ ನಕ್ಷತ್ರವುಳ್ಳ ಮಾಘ ಅಮಾವಾಸ್ಯೆಯಂದು ಪಿಂಡಪ್ರದಾನ, ಬ್ರಾಹ್ಮಣಭೋಜನ, ಗೋಗ್ರಾಸ ಮುಂತಾದವನ್ನು ಯಥಾಶಕ್ತಿ ಮಾಡುತ್ತೇನೆ.

## ಗೋಗ್ರಾಸ

ಗೋವುಗಳಿಗೆ ನೀಡುವ ಒಂದು ಹಿಡಿ  ಗೋಗ್ರಾಸ ನೂರು ಬ್ರಾಹ್ಮಣರ ಭೋಜನಕ್ಕೆ ಸಮಾನ ಎಂದು ಶಾಸ್ತ್ರ ತಿಳಿಸುತ್ತದೆ.

**ಗೋಗ್ರಾಸಸ್ಯ ವಿಶೇಷೋಸ್ತಿ**
**ಹಸ್ತಸಂಪೂರ್ಣಮಾತ್ರತಃ।**
**ಶತಬ್ರಾಹ್ಮಣಭುಕ್ತೇನ**
**ಸಮಮಾಹುರ್ಯುಧಿಷ್ಠಿರ।**

ಹೀಗಾಗಿ ಆ ದಿವಸ ಶುದ್ಧವಾದ ತಳಿಯ ಹಸುಗಳಿಗೆ ಸಮೃದ್ಧವಾಗಿ ಹುಲ್ಲು, ಬೂಸಾ, ಹಿಂಡಿ ಮುಂತಾದ ಅದರ ಆಹಾರವನ್ನು ನೀಡಬೇಕು.

ಗೋಗ್ರಾಸ ನೀಡುವದರಿಂದ ಉಂಟಾಗುವ ಮಹತ್ತರ ಫಲಗಳ ಕುರಿತು ಈ ಕೆಳಗಿನ ಲೇಖನದಲ್ಲಿ ವಿವರಿಸಲಾಗಿದೆ.
VNA276

http://vishwanandini.com/fullarticle.php?serialnumber=VNA276

## ದಾನ

ವಾರುಣೀಯೋಗ ಪಿತೃಗಳಿಗೆ ಪರಮತೃಪ್ತಿಯನ್ನು ನೀಡುವ ಕಾಲವಾದ್ದರಿಂದ ಆ ದಿವಸ ಗೋದಾನ, ಭೂದಾನ, ಹಿರಣ್ಯದಾನ, ರಜತದಾನ, ವಸ್ತ್ರದಾನ, ದೀಪದಾನ, ಗ್ರಂಥದಾನ ಮುಂತಾದ ಯಾವುದೇ ದಾನವನ್ನಾದರೂ ಅವಶ್ಯವಾಗಿ ಮಾಡತಕ್ಕದ್ದು.

## ಜ್ಞಾನಕಾರ್ಯ

ಭಗವದ್ಗೀತೆ, ವಿಷ್ಣುಸಹಸ್ರನಾಮ, ಕಾಠಕೋಪನಿಷತ್ತು, ದ್ವಾದಶಸ್ತೋತ್ರ, ಮುಂತಾದವುಗಳ ಪಾರಾಯಣ,

ಗಾಯತ್ರೀ, ನಾರಾಯಣ ಮುಂತಾದ ಮಂತ್ರಗಳ ಜಪ,

ಶಾಸ್ತ್ರಗಳ ಅರ್ಥಾನುಸಂಧಾನ ರೂಪವಾದ ಜ್ಞಾನಕಾರ್ಯವನ್ನು ಮಾಡಿ, ಮಾಡಿಸಿ

ಆ ಸತ್ಕರ್ಮದಿಂದ ಸಕಲ ಪಿತೃಗಳೂ ತೃಪ್ತರಾಗಲಿ ಎಂದು ಪ್ರಾರ್ಥಿಸುವದು ಅತ್ಯಂತ ಶ್ರೇಷ್ಠ.

## ನಮಸ್ಕಾರ

ದೇವರು ಗುರುಗಳ ಸನ್ನಿಧಾನಕ್ಕೆ ತೆರಳಿ ಮೈದಣಿಯುವಷ್ಟು, ಮನಸ್ಸಿಗೆ ತೃಪ್ತಿಯಾಗುವಷ್ಟು ನಮಸ್ಕಾರಗಳನ್ನು ಸಲ್ಲಿಸಿ ಆ ಮಹತ್ತರ ಸತ್ಕರ್ಮವನ್ನು ಪಿತೃಗಳ ತೃಪ್ತಿಗಾಗಿ ಸಮರ್ಪಿಸುವದು ಇನ್ನೂ ಶ್ರೇಷ್ಠವಾದದ್ದು.

"ಕೃಷ್ಣಪ್ರಣಾಮೀ ನ ಪುನರ್ಭವಾಯ" ಶ್ರೀಹರಿಗೆ ನಮಸ್ಕರಿಸಿದವನಿಗೆ ಮುಕ್ತಿ ನಿಶ್ಚಿತ. ನಮಗೆ, ನಮ್ಮ ಪಿತೃಗಳಿಗೆ ಉತ್ತಮ ವೈಷ್ಣವ ಜನ್ಮ ದೊರೆತು, ಸಾಧನೆಯನ್ನು ಪರಿಪೂರ್ಣಗೊಳಿಸಿಕೊಂಡು ಹರಿಯ ಸಾಕ್ಷಾತ್ಕಾರವಾಗಲಿ ಎಂದು ಪ್ರಾರ್ಥಿಸಿ ನಮಸ್ಕಾರಗಳನ್ನು ಸಲ್ಲಿಸತಕ್ಕದ್ದು.

ಎಲ್ಲದಕ್ಕಿಂತ ಮಿಗಿಲಾದದ್ದು ಶ್ರೀಹರಿಯ ನಾಮಸ್ಮರಣೆ. ಯಾವ ಸತ್ಕರ್ಮ ಮಾಡಲಿ ಬಿಡಲಿ ಆ ಹರಿಸ್ಮರಣೆ ರೂಪವಾದ ಸತ್ಕರ್ಮವನ್ನು ಅವಶ್ಯವಾಗಿ ಮಾಡತಕ್ಕದ್ದು.

## ಚೈತ್ರಮಾಸದಲ್ಲಿ ವಾರುಣೀಯೋಗ

ಬ್ರಹ್ಮಾಂಡ ಪುರಾಣ ಮತ್ತು ಸ್ಕಂದಪುರಾಣಗಳಲ್ಲಿ ಇದರ ಕುರಿತ ವಚನಗಳು ನಮಗೆ ದೊರೆಯುತ್ತವೆ .

## ಗಂಗಾಸ್ನಾನದಿಂದ ಮಹತ್ತರ ಫಲ

ಮಾಘಮಾಸದ ವಾರುಣೀಯೋಗ ಶ್ರಾದ್ಧಕ್ಕೆ ಶ್ರೇಷ್ಠವಾದರೆ ಚೈತ್ರಮಾಸದ ವಾರುಣೀಯೋಗ ಗಂಗಾಸ್ನಾನಕ್ಕೆ ಶ್ರೇಷ್ಠವಾದದ್ದು.

ಹೀಗಾಗಿ ಇಂತಹ ಸಂದರ್ಭವನ್ನು ಮೊದಲೇ ತಿಳಿದು ಅವಶ್ಯವಾಗಿ ಗಂಗಾನದಿಯಲ್ಲಿ ಸ್ನಾನವನ್ನು ಮಾಡಬೇಕು.

ಗಂಗೆಯಲ್ಲಿ ಸ್ನಾನ ಸಾಧ್ಯವಿಲ್ಲವಾದರೆ ನಮಗೆ ಹತ್ತಿರದ ಮಹಾನದಿಗಳಲ್ಲಿ, ನದಿಗಳಲ್ಲಿ ಸ್ನಾನವನ್ನು ಮಾಡಬೇಕು.

ಅದೂ ಸಾಧ್ಯವಿಲ್ಲದಾಗ ಮನೆಯಲ್ಲಿಯೇ ಗಂಗೆಯ ವಿಶೇಷ ಸ್ಮರಣೆ ಮಾಡಿ ಸ್ನಾನವನ್ನಾಚರಿಸಬೇಕು.

**ವಾರುಣೇನ ಸಮಾಯುಕ್ತಾ**
**ಮಧೌ ಕೃಷ್ಣಾ ತ್ರಯೋದಶೀ।**
**ಗಂಗಾಯಾಂ ಯದಿ ಲಭ್ಯೇತ**
**ಶತಸೂರ್ಯಗ್ರಹೈಃ ಸಮಾ।**

ಚೈತ್ರಮಾಸದ ಕೃಷ್ಣಪಕ್ಷದ ತ್ರಯೋದಶಿಯಂದು ಶತಭಿಷಾ ನಕ್ಷತ್ರವಿದ್ದರೆ ಅದು ವಾರುಣೀಯೋಗ. ಆ ದಿವಸ ಗಂಗಾಸ್ನಾನವನ್ನು ಮಾಡಿದರೆ ನೂರು ಸೂರ್ಯಗ್ರಹಣಗಳನ್ನು ಆಚರಿಸಿದ ಪುಣ್ಯ ದೊರೆಯುತ್ತದೆ.

**ಶನಿವಾರಸಮಾಯುಕ್ತಾ**
**ಸಾ ಮಹಾವಾರುಣೀ ಮತಾ।**
**ಗಂಗಾಯಾಂ ಯದಿ ಲಭ್ಯೇತ**
**ಕೋಟಿಸೂರ್ಯಗ್ರಹೈಃ ಸಮಾ।**

ಚೈತ್ರಮಾಸದ ಕೃಷ್ಣಪಕ್ಷದ ತ್ರಯೋದಶಿಯಂದು ಶತಭಿಷಾ ನಕ್ಷತ್ರದ ಜೊತೆಯಲ್ಲಿ ಶನಿವಾರೂ ಇದ್ದರೆ ಅದು ಮಹಾವಾರುಣೀಯೋಗ. ಆ ದಿವಸ ಗಂಗಾಸ್ನಾನವನ್ನು ಮಾಡಿದರೆ ಕೋಟಿ

ಸೂರ್ಯಗ್ರಹಣಗಳನ್ನು ಆಚರಿಸಿದ ಪುಣ್ಯ ದೊರೆಯುತ್ತದೆ.

**ಶುಭಯೋಗಸಮಾಯುಕ್ತಾ**
**ಶನೌ ಶತಭಿಷಾ ಯದಿ ।**
**ಮಹಾಮಹೇತಿ ವಿಖ್ಯಾತಾ**
**ತ್ರಿಕೋಟಿಕುಲಮುದ್ಧರೇತ್ ।**

ಚೈತ್ರ ಕೃಷ್ಣ ತ್ರಯೋದಶೀ, ಶತಭಿಷಾ ನಕ್ಷತ್ರ ಶನಿವಾರ ಮತ್ತು ಶುಭಯೋಗ ಇಷ್ಟೂ ಸೇರಿದರೆ ಅದು ಮಹಾಮಹಾ ವಾರುಣೀಯೋಗ ಎಂದು ಕರೆಸಿಕೊಳ್ಳುತ್ತದೆ. ನಮ್ಮ ಹಿಂದಿನ ಮೂರು ಕೋಟಿ ಕುಲಗಳ ಪಿತೃಗಳ ಉದ್ಧಾರ ಆ ದಿವಸ ಗಂಗಾಸ್ನಾನದಿಂದ ಸಾಧ್ಯ.

## ಈ ರೀತಿಯ ಮಹತ್ತ್ವ ಹೇಗೆ ಬರಲು ಸಾಧ್ಯ

ಧರ್ಮಶಾಸ್ತ್ರದ ಈ ರೀತಿಯ ವಚನಗಳನ್ನು ಕಂಡಾಗ ಕೆಲವರಿಗೆ ಸಂಶಯ ಬರಬಹುದು. ಇದು ಕೇವಲ ಗಂಗಾಸ್ನಾನದ  ಪ್ರಶಂಸೆಗಾಗಿ

ಹೊರಟ ವಚನವಿರಬಹುದು ಎಂದು. ಸರ್ವಥಾ ಹಾಗಲ್ಲ.

ಹೇಗೆ ಬಿಂದುಸರೋವರದಲ್ಲಿ ತಪಸ್ಸು ಮಾಡಿ ಸಿದ್ಧಿಗಳಿಸಿದ ಕರ್ದಮಋಷಿಗಳು, ಅಲ್ಲಿಯೇ ಮಗನಾದ ಕಪಿಲರೂಪಿ ಭಗವಂತನಿಂದ ಉಪದೇಶ ಪಡೆದ ದೇವಹೂತಿದೇವಿಯರು ಆ ಪ್ರದೇಶ ಶ್ರೇಷ್ಠ ಪುಣ್ಯಪ್ರದವಾದ ಕ್ಷೇತ್ರವಾಗಲಿ ಎಂದು ದೇವರಿಂದ ವರವನ್ನು ಪಡೆಯುತ್ತಾರೆಯೋ — ಈ ರೀತಿಯ ನೂರಾರು ದೃಷ್ಟಾಂತಗಳಿವೆ — ಚಂದ್ರ ಪ್ರಭಾಸವನ್ನು, ಗಣಪತಿ ಕಾಶಿಯನ್ನು, ನಾರದರು ಬದರಿಯನ್ನು ಶ್ರೇಷ್ಠವಾದ ಕ್ಷೇತ್ರವಾಗಲಿ ಎಂದು ದೇವರನ್ನು ಪ್ರಾರ್ಥಿಸಿ ಕ್ಷೇತ್ರ ಮಾಡಿದಂತೆ ಇಂತಹ ದಿವಸಗಳಲ್ಲಿಯೂ ಸಹ ಶ್ರೇಷ್ಠ ದೇವತೆಗಳು ಋಷಿಗಳು ಸಿದ್ಧಿಯನ್ನು ಗಳಿಸಿ ಆ ದಿವಸ ವಾರ ನಕ್ಷತ್ರ ಯೋಗಗಳಿಗೆ ಈ ರೀತಿಯ ಮಹತ್ತ್ವ ದೊರೆಯುವಂತೆ ಅನುಗ್ರಹಿಸಿರುತ್ತಾರೆ.

ಅಷ್ಟೇ ಅಲ್ಲ,  ಈ ಮಾಸ, ಪಕ್ಷ ತಿಥಿ, ವಾರ, ನಕ್ಷತ್ರ, ಯೋಗಗಳಿಗೆ ಅಭಿಮಾನಿಗಳಾದ ದೇವತೆಗಳು

ತಪಸ್ಸು ಮಾಡಿ ಸಹ  ಈ ರೀತಿಯಾದ ಸಾಮರ್ಥ್ಯವನ್ನು ಗಳಿಸಿಕೊಂಡಿರುತ್ತಾರೆ.

ಪುರಾಣಗಳನ್ನು ಸಂಶೋಧಿಸಿದಾಗ ನಮಗೆ ಹೆಚ್ಚಿನ ಅಂಶಗಳು ತಿಳಿಯಲು ಸಾಧ್ಯ.

ಸ್ವಯಂ ಶ್ರೀಮದಾಚಾರ್ಯರು ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ನೀಡಿರುವ ಒಂದು ಉದಾಹರಣೆಯನ್ನು ತಿಳಿಯೋಣ.

**ಸ್ತ್ರಿಯೋ ಮ್ಲೇಚ್ಛಹೃತಾಃ ಕೃಷ್ಣ-**
**ಪ್ರೇಷಿತಾದ್ ದಾಲ್ಭ್ಯತಃ ಪುನಃ।**
**ಗೋವಿಂದ್ವೈಕಾದಶೀಂ ಶ್ರುತ್ವಾ**
**ಕೃತ್ವಾ ಸಾರಸ್ವತೇ ಜಲೇ।**
**ನಿಮಜ್ಯ ವಾಯೋರ್ವಚನಾತ್**
**ತ್ಯಕ್ತದೇಹಾ ದಿವಂ ಯಯುಃ।**

ಶ್ರೀಕೃಷ್ಣನ ಪರಂಧಾಮದ ಪ್ರವೇಶದ ನಂತರ ಅವನ ಹದಿನಾರು ಸಾವಿರ ಮಡದಿಯರಲ್ಲಿ (ಅಷ್ಟ ಮಹಿಷಿಯರಲ್ಲ) ಕೆಲವರು, ತಾವು ಮಾಡಿದ ಅಹಂಕಾರದ ಫಲವಾಗಿ, ಮ್ಲೇಚ್ಛರ ವಶವಾಗಿ

ಬಿಡುತ್ತಾರೆ. ಆಗ ಅವರ ರಕ್ಷಣೆಗಾಗಿ ಕೃಷ್ಣ ಮೊದಲೇ ತಿಳಿಸಿದಂತೆ ದಾಲ್ಭ್ಯಮಹರ್ಷಿಗಳು ಬಂದು  ಫಾಲ್ಗುನಮಾಸದ ಶುಕ್ಲಪಕ್ಷದ ಏಕಾದಶಿ-ದ್ವಾದಶಿಗಳ ಮಹತ್ತ್ವನ್ನು ಅವರಿಗೆ ತಿಳಿಸಿ, ದುಷ್ಟರಿಂದ ಬಿಡುಗಡೆ ಪಡೆಯುವ ಉದ್ದೇಶದಿಂದ ಅದನ್ನು ಆಚರಿಸಲು ತಿಳಿಸುತ್ತಾರೆ. ಗೋಪಿಕೆಯರು ಹಾಗೆಯೇ ಮಾಡಿ ಬಿಡುಗಡೆಯನ್ನು ಪಡೆದು, ದೇಹವನ್ನೂ ತೊರೆದು ತಮ್ಮ ಮೂಲರೂಪವನ್ನು ಸೇರಿತ್ತಾರೆ.

ಈ ಫಾಲ್ಗುನ ಕೃಷ್ಣ ಏಕಾದಶಿ ದ್ವಾದಶಿಗಳು ಗೋವಿಂದೈಕಾದಶಿ ಗೋವಿಂದ ದ್ವಾದಶಿ ಎಂದು ಪುರಾಣಗಳಲ್ಲಿ ಪ್ರಸಿದ್ಧವಾಗಿವೆ, ಬಂಧನಕ್ಕೊಳಗಾದ ಭಕ್ತರ ಬಂಧನವನ್ನು ಕಳೆಯುತ್ತವೆ.

ಹೀಗಾಗಿ ಅತ್ಯಂತ ಪುಣ್ಯಪ್ರದವಾದ ಈ ದಿವಸಗಳನ್ನು ನಾವು ವ್ಯರ್ಥ ಮಾಡಿಕೊಳ್ಳದೇ ಸಾಧನೆಗಾಗಿ ಉಪಯೋಗಿಸಿಕೊಳ್ಳಬೇಕು.

ಬಿಂದು ಗಂಗೋದಕದಿಂದ, ಒಂದು ತುಳಸಿಯ ಸಮರ್ಪಣೆಯಿಂದ, ಸ್ಮರಣೆಯಿಂದ ನಮಸ್ಕಾರದಿಂದ ಪ್ರೀತನಾಗಿ ಒಲಿಯುವ ನಮ್ಮ ಸ್ವಾಮಿ, ನಮ್ಮ ಪಾಪಗಳ ಪರಿಹಾರಕ್ಕಾಗಿ, ನಮ್ಮ ಪಿತೃಗಳ ಉದ್ಧಾರಕ್ಕಾಗಿ ಈ ರೀತಿಯಾದ ನೂರಾರು ಶ್ರೇಷ್ಠ ಕಾಲಗಳನ್ನು, ಗಯಾ ಬದರಿಯಂತಯಹ ಶ್ರೇಷ್ಠ ಪ್ರದೇಶಗಳನ್ನು ನಿರ್ಮಿಸಿದ್ದಾನೆ.

ಆದ್ದರಿಂದ ಅವಶ್ಯವಾಗಿ ಆ ದಿವಸ ಏನು ಮಹತ್ತ್ವದ್ದಾಗಿ ವಿಹಿತವಾಗಿರುತ್ತದೆಯೋ ಆ ಕರ್ಮವನ್ನು ಆಚರಿಸಬೇಕು.

— ವಿಷ್ಣುದಾಸ ನಾಗೇಂದ್ರಾಚಾರ್ಯ

## ಸಂಸ್ಕೃತ ಸುರಭಿ

ವಿಶ್ವನಂದಿನಿಯ ಜ್ಞಾನದೇಗುಲದಲ್ಲಿ ಸಂಸ್ಕೃತದ ಪಾಠಗಳು ಆರಂಭವಾಗಿವೆ.

ನಮ್ಮ ಜೀವದ ಭಾಷೆ, ದೇವತೆಗಳ ಭಾಷೆ, ಭಗವಂತನನ್ನು ತಿಳಿಸಿಕೊಡುವ ಶಾಸ್ತ್ರಗಳಿರುವ ಭಾಷೆ ಸಂಸ್ಕೃತ. ಅಂತಹ ಶ್ರೇಷ್ಠ ಭಾಷೆಯನ್ನು ಈಗ ಮನೆಯಲ್ಲಿಯೇ ಕುಳಿತು ಕಲಿಯಬಹುದು. ಯಾವುದೇ ಶುಲ್ಕ ತೆರಬೇಕಾಗಿಲ್ಲ.

**ಬನ್ನಿ ಈ ವಿದ್ಯಾದಾನವನ್ನು ಸ್ವೀಕರಿಸಿ.**
**ಎಲ್ಲ ಸಜ್ಜನರಿಗೂ ತಿಳಿಸಿ.**

Link to download Vishwanandini

https://play.google.com/store/apps/details?id=com.v2.vishwanandini&hl=en

**ಸಂಸ್ಕೃತ ಕಲಿಯೋಣ**
**ಸಂಸ್ಕೃತಿ ಉಳಿಸೋಣ**

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India
nagendracharya@yahoo.co.in
WhatsApp: 9901 551 491